ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 02-11-2022

**ಹುಮನಾಬಾದ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 155/2022 ಕಲಂ 457, 380, 511 ಐಪಿಸಿ :-**

ದಿನಾಂಕ 01.11.2022 ರಂದು ಬೆಳಗ್ಗೆ 10:00 ಗಂಟೆಗೆ ಪಿರ್ಯಾದಿ ಶ್ರೀ ಸಚೀನ ತಂದೆ ಅನೀಲಕುಮಾರ ಮೈನಳ್ಳಿಕರ ಸಾ:ಎಮ್.ಪಿ ಗಲ್ಲಿ ಹುಮನಾಬಾದ ಇವರು ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಾಂಶವೇನೆಂದರೆ, ಹುಮನಾಬಾದ ಪಟ್ಟಣದ ತಾಲ್ಲೂಕ ಪಂಚಾಯತ ಕಾಂಪ್ಲೆಕ್ಸನಲ್ಲಿ ಇಂಟರನೇಟ ಕೇಫ್ ಅಂಗಡಿ ಇಟ್ಟುಕೊಂಡು ಉಪಜೀವಿಸುತ್ತಿದ್ದು ದಿನಾಲು ಬೆಳಗ್ಗೆ 09:00 ಗಂಟೆಗೆ ಅಂಗಡಿಗೆ ಬಂದು ಕೆಲಸ ಮುಗಿಸಿಕೊಂಡು ರಾತ್ರಿ 08:00 ಗಂಟೆಗೆ ಅಂಗಡಿಯ ಬೀಗ ಹಾಕಿಕೊಂಡು ಮನೆಗೆ ಹೋಗುತ್ತಿದ್ದು ದಿನಾಂಕ 30.10.2022 ರಂದು ರಾತ್ರಿ 08:00 ಗಂಟೆಗೆ ಕೆಲಸ ಮುಗಿಸಿಕೊಂಡು ಹತ್ತೀರ ಇರುವ 10,000/- ರೂಪಾಯಿ ನಗದು ಹಣವನ್ನು ಅಂಗಡಿಯ ಟೇಬಲಿನ ಡ್ರಾ ದಲ್ಲಿ ಇಟ್ಟು ಅಂಗಡಿಗೆ ಬೀಗ ಹಾಕಿಕೊಂಡು ಮನೆಗೆ ಹೋಗಿರತ್ತಾರೆ. ಹೀಗಿರುವಾಗ ದಿನಾಂಕ 31.10.2022 ರಂದು ಬೆಳಗ್ಗೆ 06:30 ಗಂಟೆ ಸುಮಾರಿಗೆ ಒಣಿಯ ಪ್ರಭು ತಂದೆ ಅಡವೆಪ್ಪಾ ಇವರು ಫೊನ ಮಾಡಿ ನಿನ್ನ ಅಂಗಡಿ ಶೇಟರಿನ ಕೀಲಿ ಮುರಿದಿದ್ದು, ಅರ್ದ ಶೇಟರ ತೆರೆದಿದ್ದು ಇರುತ್ತದೆ ಹಾಗೂ ನಿಮ್ಮ ಅಂಗಡಿಯ ಅಕ್ಕ-ಪಕ್ಕದ ಅಂಗಡಿಗಳ ಕೀಲಿ ಮುರಿದಿದ್ದು ಇರುತ್ತವೆ ಅಂತಾ ತಿಳಿಸಿರುತ್ತಾರೆ. ನಂತರ ಸದರಿ ವಿಷಯವನ್ನು ಪಕ್ಕದ ಅಂಗಡಿಯವರಾದ ದೀಪಕ ತಂದೆ ಮಾಣಿಕಪ್ಪಾ ಸಾ:ತೋಪಗಲ್ಲಿ ಹುಮನಾಬಾದ ಮತ್ತು ತುಕಾರಾಮ ತಂದೆ ಬನೆಪ್ಪಾ ಸಾ:ಹೌಸಿಂಗ ಬೊರ್ಡ ಕಾಲೋನಿ ಇವರಿಗೆ ತಿಳಿಸಿ, ಅಂಗಡಿಯ ಹತ್ತೀರ ಹೋಗಿ ನೋಡಲು ಅಂಗಡಿ ಹಾಗೂ ದೀಪಕ ಇವರ ಪ್ರೋಫೆಶನಲ್ ಕೋರಿಯರ್ ಅಂಗಡಿ ಮತ್ತು ತುಕಾರಾಮ ಇವರ ಕಂಪ್ಯೂಟರ ಅಂಗಡಿಯ ಕೀಲಿ ಮುರಿದಿದ್ದು, ಅಂಗಡಿಯ ಟೇಬಲಿನ ಡ್ರಾ ದಲ್ಲಿ ಇಟ್ಟ 10,000/- ರೂಪಾಯಿ ಹಣ ಇರಲಿಲ್ಲ. ಹೊರಗಡೆ ಬಂದು ದೀಪಕ ಮತ್ತು ತುಕಾರಾಮ ಇವರಿಗೆ ವಿಚಾರಿಸಲು ಅವರು ಯಾರೋ ಅಪರಿಚಿತ ಕಳ್ಳರು ಕಳುವು ಮಾಡುವ ಉದ್ದೇಶದಿಂದ ನಮ್ಮ ಅಂಗಡಿಯ ಕಿಲಿ ಮುರಿದು ಒಳಗಡೆ ಪ್ರವೇಶ ಮಾಡಿರುತ್ತಾರೆ ಆದರೆ ನಮ್ಮ ಅಂಗಡಿಯಿಂದ ಯಾವುದೆ ವಸ್ತು ಕಳುವಾಗಿರುವುದಿಲ್ಲ ಅಂತಾ ತಿಳಿಸಿರುತ್ತಾರೆ. ದಿನಾಂಕ 30.10.2022 ರಂದು ರಾತ್ರಿ 08:00 ಗಂಟೆಯಿಂದ ದಿನಾಂಕ 31.10.2022 ರಂದು ಬೆಳಗ್ಗೆ 06:30 ಗಂಟೆಯ ಅವಧಿಯಲ್ಲಿ ಯಾರೋ ಅಪರಿಚಿತ ಕಳ್ಳರು ನನ್ನ ಅಂಗಡಿಯ ಕೀಲಿ ಮುರಿದು ಒಳಗಡೆ ಪ್ರವೇಶ ಮಾಡಿ ಅಂಗಡಿಯ ಟೇಬಲಿನ ಡ್ರಾ ದಲ್ಲಿ ಇದ್ದ 10,000/- ರೂಪಾಯಿ ನಗದು ಹಣವನ್ನು ಕಳುವು ಮಾಡಿಕೊಂಡು ಹೋಗಿರುತ್ತಾರೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

**ಹೋಕ್ರಾಣಾ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 76/2022 ಕಲಂ 32, 34 ಕೆಇ ಕಾಯ್ದೆ ಮತ್ತು 273 ಐಪಿಸಿ :-**

ದಿನಾಂಕ 01/11/2022 ರಂದು 1030 ಗಂಟೆಗೆ ಪಿಎಸ್ಐ ರವರು ಪೊಲೀಸ ಠಾಣೆಯಲ್ಲಿದ್ದಾಗ ಬೊಂತಿಯಿಂದ ವಜ್ಜರ ಗ್ರಾಮಕ್ಕೆ ಹೊಗುವ ರೋಡ ಬೊಂತಿ ಗ್ರಾಮದ ಅಹೀಲಾಬಾಯಿ ಚೌಕ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ಒಂದು ಬಿಳಿ ಕ್ಯಾನನಲ್ಲಿ ಅನಧಿಕೃತವಾಗಿ ಕಳ್ಳ ಭಟ್ಟಿ ಸರಾಯಿ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದಾನೆ ಅಂತ ಖಚಿತ ಭಾತ್ಮಿ ಬಂದಿದ ಮೇರೆಗೆ ಸಿಬ್ಬಂದಿಯೊಂದಿಗೆ ಹೋಗಿ ಬೊಂತಿ ಗ್ರಾಮದ ಹನುಮಾನ ಮಂದಿರದ ಎದುರುಗಡೆ ಜೀಪ ಮರೆಯಾಗಿ ನಿಲ್ಲಿಸಿ ನಾವೆಲ್ಲರೂ ಕೆಳಗೆ ಇಳಿದು ಸ್ವಲ್ಪ ;ಮುಂದೆ ನಡೆದು ಕೊಂಡು ಹೊಗಿ ಮರೆಯಾಗಿ ನಿಂತು ನೊಡಲು ಬೊಂತಿ ಗ್ರಾಮದ ಅಹೀಲಾಬಾಯಿ ಚೌಕ ಹತ್ತಿರ ಒಬ್ಬ ವ್ಯಕ್ತಿ ತನ್ನ ಹತ್ತಿರ ಒಂದು ಬಿಳಿ ಪ್ಲಾಸ್ಟೀಕ 5 ಲೀಟರಿನ ಡಬ್ಬಾ ಇಟ್ಟುಕೊಂಡು ಅದರಲ್ಲಿನ ಕಳ್ಳ ಭಟ್ಟಿ ಸರಾಯಿ ಮಾರಾಟ ಮಾಡುತ್ತಿರುವ ಬಗ್ಗೆ ಖಚಿತ ಪಡಿಸಿಕೊಂಡು ಆ ವ್ಯಕ್ತಿಯ ಮೇಲೆ 1100 ಗಂಟೆಗೆ ದಾಳಿ ಮಾಡಿ ಅವನಿಗೆ ಹಿಡಿದುಕೊಂಡು ಅವನಿಗೆ ವಿಚಾರಿಸಲು ಅವನು ತನ್ನ ಹೆಸರು ವಿನಾಯಕ ತಂದೆ ಪ್ರಭಾಕರ ಪವಾರ ವಯ 24 ವರ್ಷ ಜಾತಿ ಲಮಾಣಿ ಉ; ಒಕ್ಕಲುತನ ಸಾ; ಖಡಕಾಳಿ ತಾಂಡಾ ಬೊಂತಿ ಅಂತ ತಿಳಿಸಿದನು. ಸದರಿ ವ್ಯಕ್ತಿಯ ವಶದಲ್ಲಿದ್ದ 5 ಲೀಟರಿನ ಕ್ಯಾನವನ್ನು ಪರಿಶೀಲಿಸಿ ಅವನಿಗೆ ಈ ಕ್ಯಾನಿನಲ್ಲಿ ಏನಿದೆ ಅಂತ ವಿಚಾರಿಸಲು ಅವನು ಕ್ಯಾನಿನಲ್ಲಿ ಕಳ್ಳ ಭಟ್ಟಿ ಸರಾಯಿ ಇದೆ ಒಂದು ಲೀಟರಿಗೆ 200/- ರೂಪಾಯಿಯಂತೆ ಜನರಿಗೆ ಕುಡಿಯಲು ಮಾರಾಟ ಮಾಡುತ್ತಿದ್ದೆನೆಂದು ಹೇಳಿದನು ಅಂದಾಜು ಕಿಮ್ಮತ್ತು 1000/- ರೂಪಾಯಿದು ಈ ಕಳ್ಳ ಭಟ್ಟಿ ಸರಾಯಿ ಜಪ್ತಿ ಮತ್ತು ಆರೋಪಿತನನ್ನು ದಸ್ತಗಿರಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.